4)	CBZ	72
5)	CZM1	45
6)	CBM1	45
7)	BZP	72
8)	BIGs	60
9)	BISBt	20
10)	CBBt	60
11)	CZBt	60
12)	EBSt	20

ಇ) ಇಲ್ಲ

ಈ) 2003–04ನೇ ಸಾಲಿಗಾಗಿ ಗ್ರಂಥಾಲಯ ಪುಸ್ತಕಗಳ ಖರೀದಿಗಾಗಿ ರೂ 1,10,000/– ಗಳನ್ನು ಪ್ರಯೋಗಾಲಯ ಉಪಕರಣಗಳ ಖರೀದಿಗಾಗಿ ರೂ 2,25,000/–ಗಳ ವೆಚ್ಚ ಭರಿಸಲಾಗಿರುತ್ತದೆ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು 2003–04ನೇ ಸಾಲಿನಲ್ಲಿ ಯಾವುದೇ ವೆಚ್ಚಗಳನ್ನು ಭರಿಸಲಾಗಿರುವುದಿಲ್ಲ

ಉ) 2004–05ನೇ ಸಾಲಿಗೆ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ

472(450) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರತಿದಿನ ಸರಾಸರಿ ಉತ್ಪಾದನೆಯಾಗುವ ಹಾಲಿನ ಪ್ರಮಾಣವೆಷ್ಟು.

ಆ) ರಾಜ್ಯದಲ್ಲಿ ಹಾಲಿಗಾಗಿ ಇರತಕ್ಕ ಬೇಡಿಕೆ ಎಷ್ಟು

ಇ) ರಾಜ್ಯಕ್ಕೆ ಪ್ರತಿದಿನ ಬೇರೆ ರಾಜ್ಯಗಳಿಂದ ಬರತಕ್ಕ ಹಾಲಿನ ಪ್ರಮಾಣವೆಷ್ಟು

ಈ) ಹೆಚ್ಚುವರಿ ಹಾಲನ್ನು ಯಾವ ರೀತಿ ಸದುಪಯೋಗಪಡಿಸಿಕೊಳ್ಳಲಾಗುತ್ತಿದೆ

ಉ) ರಾಜ್ಯದಲ್ಲಿ ಹೆಚ್ಚು ಹಾಲಿನಮಡಿ ಉತ್ಪಾದನೆ ಘಟಕಗಳನ್ನು ಪ್ರಾರಂಭಿಸಲಾಗುವುದೇ,

ಊ) ರಾಜ್ಯಕ್ಕೆ ಹೊರರಾಜ್ಯಗಳಿಂದ ಬರತಕ್ಕ ಹಾಲಿನ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು

ಋ) ಕೆ ಎಂ ಎಫ್ ವತಿಯಿಂದ ಹಾಲಿನ ಪದಾರ್ಥಗಳನ್ನು ತಯಾರಿಸಲಾಗುತ್ತಿದೆಯೆ, (ಅದರ ವಿವರ ನೀಡುವುದು),

ಎ) ಎಲ್ಲಾ ಸರ್ಕಾರಿ ಹಾಸ್ಟೆಲ್‌ಗಳು, ಆಸ್ಪತ್ರೆಗಳು ಕಡ್ಡಾಯವಾಗಿ ಕೆ ಎಂ ಎಫ್ ನಿಂದಲೇ ಹಾಲನ್ನು ಪಡೆದುಕೊಳ್ಳಬೇಕೆಂದು ಸರ್ಕಾರ ಆಜ್ಞೆ ಹೊರಡಿಸಿದೆಯೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ಜಿಲ್ಲಾ ಹಾಲು ಒಕ್ಕೂಟಗಳ ಮುಖಾಂತರ ಜುಲೈ ಮೊದಲ ವಾರದಲ್ಲಿ ದಿನವಹಿ ಸರಾಸರಿ 27 75 ಲಕ್ಷ ಲೀಟರ್‌ಗಳಷ್ಟು ಹಾಲು ಉತ್ಪಾದನೆಯಾಗಿದೆ

ಆ) ಜುಲೈ ಮೊದಲ ವಾರದಲ್ಲಿ ಒಕ್ಕೂಟಗಳ ಮುಖಾಂತರ ದಿನವಹಿ ಸರಾಸರಿ 15 56 ಲಕ್ಷ ಲೀಟರ್ ಹಾಲು ಮಾರಾಟವಾಗಿರುತ್ತದೆ

ಇ) ಜೂನ್ ಮಾಹೆಯಲ್ಲಿ ದಿನವಹಿ ಸರಾಸರಿ 2 81 ಲಕ್ಷ ಲೀಟರ್ ಹಾಲು ಹೊರ ರಾಜ್ಯದಿಂದ ಕರ್ನಾಟಕ ರಾಜ್ಯಕ್ಕೆ ಬಂದಿರುತ್ತದೆ

ಈ) ದಿನವಹಿ 12 19 ಲಕ್ಷ ಲೀಟರ್ ಅಧಿಕ ಹಾಲು ಶೇಖರಣೆಯಾಗುತ್ತಿದ್ದು, ಅದರ ವಿಲೇವಾರಿ ಈ ಕೆಳಕಂಡಂತೆ ಮಾಡಲಾಗುತ್ತದೆ

(ಲಕ್ಷ ಲೀಟರ್‌ಗಳಲ್ಲಿ)

1	ಸ್ಥಳೀಯ ಹಾಲು ಉತ್ಪನ್ನಗಳ ಮಾರಾಟಕ್ಕೆ (ಮೊಸರು, ಗುಡ್ ಲೈಫ್, ಮತ್ತಿತರ ತಾಜಾ ಉತ್ಪನ್ನಗಳು)	1 50
2	ಸಗಟು ರೂಪದಲ್ಲಿ ನೆರೆ ರಾಜ್ಯಗಳಿಗೆ ಹಾಲು ಮಾರಾಟ	1 74
	ಅ) ದೆಹಲಿ ಮದರ್ ಡೈರಿ, ದೆಹಲಿ	
	ಆ) ಆಂಧ್ರಪ್ರದೇಶ ಹಾಲು ಮಹಾಮಂಡಳಿ,	0 90
	ಇ) ಗೋವಾ ಹಾಲು ಒಕ್ಕೂಟ	0 25
	ಈ) ಬೆಣ್ಣೆ ಹಾಲು ಹಾಲಿನಪುಡಿ ಪರಿವರ್ತನೆಗಾಗಿ	7 80
	ಒಟ್ಟು	12 19

ಉ) ರಾಜ್ಯದಲ್ಲಿ ಹೊಸದಾಗಿ ಹಾಲಿನ ಪುಡಿ ಘಟಕ, ಪ್ರಾರಂಭಿಸಲು ರಾ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಗೆ ಪತ್ರ ಬರೆಯಲಾಗಿದ್ದು, ಶೀಘ್ರದಲ್ಲಿ ಹಾಲಿನಪುಡಿ ಘಟಕ ಸ್ಥಾಪಿಸಲು ಯೋಚಿಸಲಾಗಿದೆ

ಊ) ರಾಜ್ಯಕ್ಕೆ ಹೊರೆ ರಾಜ್ಯದಿಂದ ಬರುವ ಹಾಲುಗಳ ಗುಣಮಟ್ಟವನ್ನು ಸಂಬಂಧಪಟ್ಟ ಪುರಸಭೆ, ನಗರಸಭೆ ಹಾಗೂ ಮಹಾನಗರಸಭೆಗಳ ಸಿಬ್ಬಂದಿಯು ಪರಿಶೀಲಿಸಿ, ಗುಣಮಟ್ಟವಲ್ಲದ ಹಾಲೆಂದು ದೃಢಪಟ್ಟಲ್ಲಿ ಅದನ್ನು ನಾಶಗೊಳಿಸಲಾಗುತ್ತದೆ ಹಾಗೂ ತಪ್ಪಿತಸ್ಥರ ವಿರುದ್ಧ ಆಹಾರ ಕಲಬೆರಕೆ ನಿಯಂತ್ರಣ ಕಾಯ್ದೆಯಡಿ ಮೊಕದ್ದಮೆ ಹೂಡಲಾಗುವುದು

ಋ) ಕರ್ನಾಟಕ ಹಾಲು ಮಹಾಮಂಡಳಿ, ಜಿಲ್ಲಾ ಹಾಲು ಒಕ್ಕೂಟಗಳ ವತಿಯಿಂದ ಈ ಕೆಳಕಂಡ ಪದಾರ್ಥಗಳನ್ನು ತಯಾರಿಸಲಾಗುತ್ತದೆ

1	ತುಪ್ಪ	10	ಬರ್ಫಿ
2.	ಬೆಣ್ಣೆ	11	ಧಾರವಾಡ ಪೇಡಾ
3	ಕೆನೆರಹಿತ ಹಾಲಿನ ಪುಡಿ	12	ಕುಂದಾ
4	ಮೊಸರು	13	ರಸಗುಲ್ಲಾ
5	ಪೇಡಾ	14	ಬಾದಾಮ್ ಪುಡಿ
6	ಐಸ್ ಕ್ರೀಮ್	15	ಜಾಮೂನ್
7	ಸುವಾಸಿತ ಹಾಲು	16	ಗುಡ್ ಲೈಫ್
8	ಮೈಸೂರುಪಾಕ್	17	ಸ್ಲಿಮ್
9	ಮಜ್ಜಿಗೆ		

ಎ) ಇಲ್ಲಿ